ಆರ್.ಬಿ.ಐ/2006-2007/214
ಡಿಬಿಓಡಿ.ಸಂಖ್ಯೆ. ಎಲ್ಇಜಿ.ಬಿಸಿ. 49/09.07.005/2006-07 ಡಿಸೆಂಬರ್ 18, 2006

ಎಲ್ಲಾ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೆ,

ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯ ಮತ್ತು ಚೆಕ್ ಸ್ವೀಕೃತಿ ಸೌಲಭ್ಯ

ನಮ್ಮ ಸುತ್ತೋಲೆ ಡಿಬಿಓಡಿ.ಸಂಖ್ಯೆ. ಎಲ್ಇಜಿ.ಬಿಸಿ. 74/09.07.005/2003-04 ದಿನಾಂಕ 10 ಏಪ್ರಿಲ್ 2004, ಪತ್ರದಲ್ಲಿ ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯ ಹಾಗೂ ಕೌಂಟರ್‌ಗಳಲ್ಲಿ ಚೆಕ್‌ಗಳನ್ನು ಪಡೆದು ಸ್ವೀಕೃತಿ ನೀಡುವ ಸೌಲಭ್ಯಗಳು ಗ್ರಾಹಕರಿಗೆ ಲಭ್ಯವಾಗಿರಬೇಕು ಮತ್ತು ಯಾವುದೇ ಶಾಖೆಯು ಕೌಂಟರ್‌ನಲ್ಲಿ ಚೆಕ್ ನೀಡುವ ಗ್ರಾಹಕರಿಗೆ ಸ್ವೀಕೃತಿಯನ್ನು ನೀಡಲು ನಿರಾಕರಿಸಕೂಡದೆಂದು ಆದೇಶಿಸಲಾಗಿತ್ತು.

2. ಹಲವಾರು ಬ್ಯಾಂಕು ಶಾಖೆಗಳಲ್ಲಿ ಚೆಕ್‌ಗಳನ್ನು ಕೌಂಟರ್‌ಗಳಲ್ಲಿ ಸ್ವೀಕರಿಸಲಾಗುತ್ತಿಲ್ಲ ಮತ್ತು ಚೆಕ್‌ಗಳನ್ನು ಚೆಕ್ ಡ್ರಾಪ್ ಬಾಕ್ಸ್‌ನಲ್ಲೇ ಹಾಕುವಂತೆ ಗ್ರಾಹಕರನ್ನು ಒತ್ತಾಯಿಸಲಾಗುತ್ತಿದೆ ಎಂದು ಭಾರತೀಯ ರಿಜರ್ವ್ ಬ್ಯಾಂಕ್ ಮತ್ತು ಬ್ಯಾಂಕಿಂಗ್ ಲೋಕಪಾಲರ ಕಚೇರಿಗೆ ಅನೇಕ ದೂರುಗಳು ಬರುತ್ತಲಿವೆ. ಆದ್ದರಿಂದ ಬ್ಯಾಂಕುಗಳು ಮೇಲ್ಕಂಡ ಸುತ್ತೋಲೆಯಲ್ಲಿ ನೀಡಲಾದ ನಿರ್ದೇಶನಗಳನ್ನು ಕಟ್ಟು-ನಿಟ್ಟಾಗಿ ಪಾಲಿಸಬೇಕು ಮತ್ತು ಗ್ರಾಹಕರು ಚೆಕ್ ಡ್ರಾಪ್ ಬಾಕ್ಸ್‌ಗಳಲ್ಲಿ ಚೆಕ್‌ಗಳನ್ನು ಹಾಕಲು ಒತ್ತಾಯಿಸಕೂಡದು.

3. ಗ್ರಾಹಕರು ಈ ಸಂಬಂಧವಾಗಿ ಸೂಕ್ತ ನಿರ್ಣಯವನ್ನು ತೆಗೆದುಕ್ಕೊಳ್ಳಲನುವಾಗುವಂತೆ ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯಗಳಿರುವ ಕಡೆಯಲ್ಲೆಲ್ಲ, ಚೆಕ್ ಡ್ರಾಪ್ ಬಾಕ್ಸ್ ಸೌಲಭ್ಯ ಹಾಗೂ ಕೌಂಟರ್‌ಗಳಲ್ಲಿ ಚೆಕ್ ಸ್ವೀಕೃತಿ ಎರಡೂ ಆಯ್ಕೆಗಳನ್ನು ಗ್ರಾಹಕರ ಗಮನಕ್ಕೆ ತರುವುದು ಅತ್ಯಗತ್ಯ. ಆದ್ದರಿಂದ ಬ್ಯಾಂಕುಗಳು ಚೆಕ್ ಡ್ರಾಪ್ ಬಾಕ್ಸ್‌ಗಳ ಮೇಲೆಯೇ ಈ ಕೆಳಗಿನಂತೆ ಕಡ್ಡಾಯವಾಗಿ ಪ್ರದರ್ಶಿಸಲು ಆದೇಶಿಸಲಾಗಿದೆ.
ಗ್ರಾಹಕರು ಕೌಂಟರ್‌ಗಳಲ್ಲೂ ಚೆಕ್‌ಗಳನ್ನು ಸಲ್ಲಿಸಿ ಸಂದಾಯ ಚೀಟಿ ಮೇಲೆ ಸ್ವೀಕೃತಿ ಧೃಡೀಕರಣವನ್ನು ಪಡೆಯಬಹುದಾಗಿದೆ."
ಈ ಮೇಲಿನ ಸೂಚನೆಯನ್ನು ಇಂಗ್ಲೀಷ್, ಹಿಂದಿ ಹಾಗೂ ಆ ರಾಜ್ಯದ ಪ್ರಾದೇಶಿಕ ಭಾಷೆಗಳಲ್ಲಿ ಪ್ರದರ್ಶಿಸಬಹುದು.

4. ದಯವಿಟ್ಟು ಸ್ವೀಕೃತಿ ದೃಢೀಕರಿಸಿ.

ತಮ್ಮ ವಿಶ್ವಾಸಿ

(ಪ್ರಶಾಂತ್ ಸರಣ್)
ಮುಖ್ಯ ಪ್ರಧಾನ ವ್ಯವಸ್ಥಾಪಕ - ಪ್ರಭಾರ